**ಓ ಎಸ್ ನಂ. 73/2022 ಡಿಡಬ್ಲ್ಯೂ2**

**ಸಾಕ್ಷಿಯನ್ನು ದಿ: 13.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನನ್ನ ತಂದೆಯ ಒಡಹುಟ್ಟಿದವರು 6 ಜನ. ಅವರು ಯಾವಾಗ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಪಾಲಿಗೆ ವ್ಯವಸಾಯದ ಜಮೀನುಗಳು ಹಾಗೂ ಮನೆ ಬಂದಿತ್ತು. ನಮ್ಮ ತಂದೆಗೆ ಸುಮಾರು 9 ರಿಂದ 10 ಐಟಂ ಸ್ವತ್ತುಗಳು ಬಂದಿದ್ದವು. ಆ ಸ್ವತ್ತುಗಳ ಸರ್ವೆ ನಂಬರನ್ನು ಹೇಳಲಾಗುವುದಿಲ್ಲ. ದಾವಾ ಷೆಡ್ಯೂಲ್ ಐಟಂ ನಂ. 2, 5, 7, 8, 9 ಮತ್ತು 12 ನಮ್ಮ ತಂದೆಗೆ ಅವರ ತಂದೆ ಕಡೆಯಿಂದ ಬಂದಿರುವ ಸ್ವತ್ತುಗಳು ಎಂದರೆ ಸರಿ. ಇವುಗಳ ಜೊತೆಯಲ್ಲಿ ಊರಿನಲ್ಲಿರುವ ಹಳೆಯ ಮನೆ ಅಂದರೆ ದಾವಾ ಐಟಂ ನಂ. 16 ಸಹ ನಮ್ಮ ತಂದೆಗೆ ಬಂದಿದೆ ಎಂದರೆ ಸರಿ. ಈ ಆಸ್ತಿಗಳೆಲ್ಲಾ ಮಳೆಯಾಶ್ರಿತ ಜಮೀನುಗಳು ಎಂದರೆ ಸರಿಯಲ್ಲ, ನೀರಾವರಿ ಜಮೀನು. ಆ ಜಮೀನುಗಳಿಗೆ ಹೇಮಾವತಿ ನದಿ ನೀರು, ಕಾಲುವೆ ನೀರು, ಕೆರೆ ನೀರು ಹಾಗೂ ಪಂಪ್ ಸೆಟ್ಟು ನೀರು ಇದೆ. ಸರ್ವೆ ನಂ. 547/1, 547/2, 547/3 ಹಾಗೂ 547/4 ರಲ್ಲಿ ಪಂಪು ಸೆಟ್ಟು ಹಾಗೂ 150 ತೆಂಗಿನ ಮರಗಳು ಇದೆ. ಬೋರ್ ವೆಲ್ ಕೊರೆಯಿಸಿ ಸುಮಾರು 17-18 ವರ್ಷವಾಗಿದೆ. ಬೋರ್ ವೆಲ್ ಕೊರೆಸಿರುವ ಬಗ್ಗೆ ದಾಖಲೆಗಳು ಇಲ್ಲ. ಬೋರ್ ವೆಲ್ ಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇವೆ. ವಿದ್ಯುತ್ ಸಂಪರ್ಕ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಮ್ಮ ಪಿತ್ರಾರ್ಜಿತ ಆಸ್ತಿಗಳೆಲ್ಲಾ ಮಳೆಯಾಶ್ರಿತ ಆಸ್ತಿಗಳು ಎಂದರೆ ಸರಿಯಲ್ಲ. ಅವುಗಳಿಗೆ ನಾನು ಮೇಲೆ ಹೇಳಿದ ರೀತಿಯಲ್ಲಿ ನೀರಾವರಿ ಮೂಲ ಎಂದರೆ ಸರಿಯಲ್ಲ. ಆ ಜಮೀನುಗಳಲ್ಲಿ ರಾಗಿ ಮತ್ತು ಹುರುಳಿ ಬೆಳೆಯುವ ಜಮೀನು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಭತ್ತ ಮತ್ತು ತೆಂಗು ಬೆಳೆಯುತ್ತೇವೆ ಎಂದು ಹೇಳುತ್ತಾರೆ. ಬೋರ್ ವೆಲ್

ಕೊರೆಸಿದಾಗಿನಿಂದಲೂ ಭತ್ತ ಮತ್ತು ತೆಂಗು ಬೆಳೆಯುತ್ತಿದ್ದೇವೆ. ಭತ್ತ ಹಾಗೂ ತೆಂಗು ಬೆಳೆದಿರುವ ಬಗ್ಗೆ ಆರ್ ಟಿ ಸಿ ಯಲ್ಲಿ ನಮೂದು ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ನಮ್ಮ ತಂದೆಗೆ 3 ಜನ ಮಕ್ಕಳು. ವಾದಿಯ ಮದುವೆಯನ್ನು ನಮ್ಮ ತಂದೆಯು ಬದುಕಿದ್ದಾಗಲೇ ಮಾಡಲಾಗಿದೆ. 6 ನೇ ಪ್ರತಿವಾದಿಯ ಮದುವೆಯನ್ನು ವಾದಿಯ ಮದುವೆಗಿಂತ ಮೊದಲೇ ಮಾಡಲಾಗಿದೆ. ಅವರು ಅವರವರ ಗಂಡಂದಿರ ಮನೆಯಲ್ಲಿ ಇದ್ದಾರೆ ಎಂದರೆ ನಮ್ಮ ಮನೆಗೆ ಬರುತ್ತಿಲ್ಲ. ನಾನು ಚಿಕ್ಕಂದಿನಿಂದಲೂ ದನದ ದಳ್ಳಾಳಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಹಾಗೆಯೇ ನಮ್ಮ ಕುಟುಂಬದ ಅಬಿವೃದ್ದಿಗಾಗಿ ನಾನು ಹಾಗೂ ನನ್ನ ಮಕ್ಕಳು ಗಣಿಗಾರಿಕೆಯನ್ನು ಸಹ ಮಾಡುತ್ತಿದ್ದೆವು ಎಂದರೆ ನಾನು ಮಾಡಿಲ್ಲ, ನನ್ನ ಮಕ್ಕಳು ಮಾಡಿರಬಹುದು. ಸಾಕ್ಷಿ ಮುಂದುವರಿದು ಜಮೀನುಗಳು ತನ್ನ ಹೆಸರಿನಲ್ಲಿ ಇರುವ ಕಾರಣ ತನ್ನ ಆರ್ ಟಿ ಸಿ ಗಳನ್ನು ಮತ್ತು ಸಹಿಯನ್ನು ತನ್ನ ಮಕ್ಕಳು ಪಡೆದಕೊಂಡರು ಎಂದು ಹೇಳುತ್ತಾರೆ. ಗಣಿಗಾರಿಕೆ ಪರವಾನಗಿ ಯಾರ ಹೆಸರಿನಲ್ಲಿ ಪಡೆದುಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ಟಿಪ್ಪರ್ ಹಾಗೂ ಟ್ರಾಕ್ಟರ್ ಇದ್ದು ಅದರಲ್ಲಿ ನಮ್ಮ ಮಕ್ಕಳು ಗಣಿಗಾರಿಕೆ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಅದರಿಂದ ಬರುತ್ತಿದ್ದ ಆದಾಯದ ಪೈಕಿ ಸ್ವಲ್ಪವನ್ನು ಸಹ ತನಗೆ ನೀಡಿಲ್ಲ ಎಂದು ಹೇಳುತ್ತಾರೆ. ಗಣಿಗಾರಿಕೆಯಿಂದ ಬಂದ ಆದಾಯದಿಂದ ಹಾಗೂ ನನ್ನ ದಳ್ಳಾಳಿ ಕಸಬಿನಿಂದ ಬಂದ ಆದಾಯದಿಂದ ದಾವಾನುಸೂಚಿ ಐಟಂ ನಂ. 1, 4, 10, 11, 14 ಹಾಗೂ 15 ರ ಸ್ವತ್ತುಗಳನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾನುಸೂಚಿ ಐಟಂ ನಂ. 1, 4, 10, 11, 14 ಹಾಗೂ 15 ರ ಸ್ವತ್ತುಗಳು ನನ್ನ ಹಾಗೂ ನನ್ನ ಮಕ್ಕಳ ಸ್ವತ್ತುಗಳು ಎಂದರೆ ಸರಿಯಲ್ಲ.

ದಾವಾ ಐಟಂ ನಂ. 13 ರಲ್ಲಿರುವ ಸರ್ವೆ ನಂ. 18/4 ರಲ್ಲಿನ 0.05 ಗುಂಟೆ ಜಮೀನು ನನ್ನ ಹೆಂಡತಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಆ ಸ್ವತ್ತನ್ನು ನಿಂಗಮ್ಮ ಹಾಗುಾ ಅವರ ಮಕ್ಕಳ ಕಡೆಯಿಂದ ನನ್ನ ಹೆಸರಿನಲ್ಲಿ ಕ್ರಯಕ್ಕೆ ಪಡೆಯಲಾಗಿದೆ ಎಂದರೆ

ಸರಿ. 2017 ರವರೆವಿಗೂ ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಒಟ್ಟಿಗೆ ಇದ್ದೆವು ಎಂದರೆ ಸರಿಯಲ್ಲ. ನನ್ನ ಮಕ್ಕಳ ಮದುವೆಯನ್ನು ನಾನೇ ಮಾಡಿದ್ದೇನೆ. ನನ್ನ ಹಿರಿಯ ಮಗ ಶ್ರೀನಿವಾಸರವರ ಮದುವೆಯನ್ನು ಯಾವ ವರ್ಷದಲ್ಲಿ ಮಾಡಿದೆ ಎಂದು ನೆನಪಿಲ್ಲ. ಮಗಳ ಮದುವೆಯನ್ನು ಯಾವ ವರ್ಷದಲ್ಲಿ ಮಾಡಿದ್ದೇನೆ ಎಂದು ನೆನಪಿಲ್ಲ. ಹಾಗೆಯೇ ಕೊನೆಯ ಮಗ ಪ್ರಕಾಶ್ ರವರ ಮದುವೆಯನ್ನು ಯಾವ ವರ್ಷದಲ್ಲಿ ಮಾಡಿದ್ದೇನೆ ಎಂಬುದು ಸಹ ನೆನಪಿಲ್ಲ. 2011 ರಲ್ಲಿ ನಮಗೆ ವಾಸಿಸಲು ಮನೆ ಇರಲಿಲ್ಲವಾದ ಕಾರಣ ದಾವಾ ಅನುಸೂಚಿ ಐಟಂ ನಂ.13 ರಲ್ಲಿ ಮನೆ ಕಟ್ಟಿಕೊಂಡಿದ್ದೇವೆ ಎಂದರೆ ಸರಿ. ಗಣಿಗಾರಿಕೆಯಿಂದ ಬರುತ್ತಿದ್ದ ಆದಾಯದಿಂದ ನನ್ನ ಮಕ್ಕಳು ಸುಮಾರು 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವ್ಯವಸಾಯದಿಂದ ಬರುತ್ತಿದ್ದ ಆದಾಯ ಹಾಗೂ ತೆಂಗು, ಭತ್ತ ಇತ್ಯಾದಿಗಳಿಂದ ಬಂದ ಆದಾಯದಿಂದ ಮನೆ ನಿರ್ಮಾಣ ಮಾಡಿರುವುದಾಗಿ ಹೇಳುತ್ತಾರೆ. ವ್ಯವಸಾಯದಿಂದ ಬರುತ್ತಿದ್ದ ಆದಾಯ ಹಾಗೂ ತೆಂಗು, ಭತ್ತ ಇತ್ಯಾದಿಗಳಿಂದ ಬಂದ ಆದಾಯದಿಂದ ಮನೆ ನಿರ್ಮಾಣ ಮಾಡಿರುವುದಾಗಿ ನನ್ನ ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರದ ಕಾರಣ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿನ ಸಂಗತಿಗಳು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನ್ನ ಪರವಾಗಿ ಲಿಖಿತ ಪ್ರತಿವಾದ ಪತ್ರ ದಾಖಲೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ನನ್ನ ವಕೀಲರಿಗೆ ಈ ಕೇಸಿನ ಕುರಿತಂತೆ ಮಾಹಿತಿ ನೀಡಿದ್ದೇನೆ. ಮನೆ ಕಟ್ಟಲು ನನ್ನ ವ್ಯವಸಾಯದಿಂದ ಬಂದಂತಹ ಆದಾಯವನ್ನು ಬಳಕೆ ಮಾಡಿಕೊಂಡಿದ್ದೆ ಎಂದು ನಾನು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿದ್ದೇನೆ. ನನ್ನ ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ವ್ಯವಸಾಯದಿಂದ ಬಂದ ಆದಾಯದಿಂದ ದಾವಾನುಸೂಚಿ ಐಟಂ ನಂ. 13 ರಲ್ಲಿ ಮನೆ ಕಟ್ಟಿದ್ದೇನೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಸಾ ಓ ಹೇ ಸ ಒ

(ಬಾಬು ಎನ್)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಪಾಂಡವಪುರ